

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಭಾರತೀಯ ಸಮಾಜ ಎತ್ತ ಸಾಗಿದೆ?

"ಕನಿಷ್ಠಪಕ್ಷ ಒಂದು ಸಾವಿರ ಜನವಾದರೂ ಕುಡಿಯುವುದನ್ನು ಬಿಟ್ಟಿದ್ದರೆ ನಮ್ಮ ಗುರುಗಳಿಗೆ ಮರ್ಯಾದೆ ಬರುತ್ತಿತ್ತು" ಎಂದು ಭಾಷಣಕಾರರೊಬ್ಬರು ನೊಂದು ನುಡಿದರು. ಎರಡು ದಶಕಗಳ ಹಿಂದೆ ಮದ್ಯಪಾನ ನಿಷೇಧ ಆಂದೋಲನ ಕೈಗೊಂಡಿದ್ದಾಗ ಜನರ ಈ ದುಶ್ಚಟವನ್ನು ಬಿಡಿಸುವಲ್ಲಿ ವ್ಯರ್ಥ ಶ್ರಮವಾಗುತ್ತಿದೆಯೇನೋ ಎಂಬ ಧ್ವನಿ ಅವರ ಮಾತಿನಲ್ಲಿ ಅಡಗಿತ್ತು. ಆಂದೋಲನವು ಕೈಗೊಂಡ ಉದ್ದೇಶದ ಬಗ್ಗೆ ಅವರಿಗೆ ಕಳಕಳಿ ಇದ್ದರೂ ಅದರ ಸಾಧನೆಯ ಬಗ್ಗೆ ಅವರಿಗೆ ಅಪನಂಬಿಕೆ ಇರುವುದು ಎದ್ದು ಕಾಣುತ್ತಿತ್ತು. ಕೈಗೊಂಡ ಈ ಕಾರ್ಯದ ಬಗ್ಗೆ ಸಾರ್ವಜನಿಕರ ದೃಷ್ಟಿಯಲ್ಲಿ ಮೆಚ್ಚುಗೆ ಇದ್ದರೂ, ಕುಡಿಯುವುದನ್ನು ಬಿಡಿಸಲು ಎಲ್ಲಿಯಾದರೂ ಸಾಧ್ಯವೇ, ಅಸಾಧ್ಯವಾದ ಇಂತಹ ಕಾರ್ಯಕ್ಕೆ ಗುರುಗಳು ಕೈಹಾಕಿದ್ದು ಸರಿಯಲ್ಲ ಎಂಬ ಧೋರಣೆ ಜನರ ಮನಸ್ಸಿನಲ್ಲಿರುವುದು ರಹಸ್ಯದ ಸಂಗತಿಯೇನಲ್ಲ. ಆದರೆ ಅಂತಹ ನಿರಾಶಾದಾಯಕವಾದ ಮತ್ತು ಕೀಳರಿಮೆಯ ಯೋಚನೆಯನ್ನಾದರೂ ನಮ್ಮ ಜನರು ಏಕೆ ಮಾಡಬೇಕು? ಆಂದೋಲನವು ತನ್ನ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾದರೆ ನಮಗೆ ಅವಮರ್ಯಾದೆಯಾಗುವುದೆಂದು ಭಾವಿಸಿ ನಾಚಿಕೆ ಪಟ್ಟುಕೊಳ್ಳಲು ಕಾರಣವೇ ಇಲ್ಲ. ನಿಜವಾಗಿ ನಾಚಿಕೆಯಾಗಬೇಕಾದ್ದು ಗುರುಗಳಿಗಲ್ಲ. ಇಷ್ಟೆಲ್ಲಾ ತಿಳಿ ಹೇಳಿದರೂ ಕುಡಿಯುವುದನ್ನು ಕೈಬಿಡಲಾರದಷ್ಟು ಚಟವನ್ನು ಅಂಟಿಸಿಕೊಂಡಿರುವ ಕುಡುಕರಿಗೆ ನಾಚಿಕೆಯಾಗಬೇಕು. ಕುಡಿತದ ಕಾರಣದಿಂದ ತನ್ನ ಆರೋಗ್ಯ ಮತ್ತು ತನ್ನ ಸಂಸಾರ ಹಾಳಾಗುತ್ತಿದೆಯೆಂದು ಕಣ್ಣಾರೆ ಕಂಡೂ ಕುಡಿತದ ಚಟವನ್ನು ಬಿಡಲಾಗದ ದುರ್ಬಲ ಮನಸ್ಸಿನ ವ್ಯಕ್ತಿಯನ್ನು ಕಂಡು ಕನಿಕರ ಪಡಬೇಕೇ ಹೊರತು ಇಂದಲ್ಲಾ ನಾಳೆ ಸುಧಾರಿಸಿಯಾನು ಎಂಬ ಆಶಾಭಾವನೆಯಿಂದ ತಿಳಿ ಹೇಳಲು ಅದೇಕೆ ನಾಚಿಕೆಪಟ್ಟುಕೊಳ್ಳಬೇಕು? ಮಹಾತ್ಮಾ ಗಾಂಧೀಜಿಯವರು ತಮ್ಮ ಆತ್ಮ ಕಥೆಯಲ್ಲಿ ಹೇಳುವಂತೆ "ನಾಚಿಕೆ ಇರುವುದು ಜೈಲಿಗೆ ಹೋಗುವುದರಲ್ಲಲ್ಲ, ಅಂತಹ ಕೆಟ್ಟ ಕೆಲಸವನ್ನು ಮಾಡುವುದರಲ್ಲಿ!" (The shame lies not so much in going to jail but in committing the offence that makes one go to jail)

ಜನರು ತಾವು ಮಾಡುವ ಹೀನ ಕೃತ್ಯಗಳಿಗೆ ಹೆದರುವುದಕ್ಕೆ ಬದಲಾಗಿ ಪೋಲೀಸರು ಬೀದಿಯಲ್ಲಿ ಕೈಕೋಳವನ್ನು ಹಾಕಿ ಎಳೆದುಕೊಂಡು ಹೋಗುವುದಕ್ಕೆ ಹೆಚ್ಚು ಹೆದರುವಂತೆ ಕಾಣಿಸುತ್ತದೆ. ತಮ್ಮ ಹೀನ ಕೃತ್ಯಗಳು ಬಹಿರಂಗವಾಗದಿದ್ದರೆ ಸಾಕು, ಜನರು ಅವುಗಳನ್ನು ಮತ್ತೆ ಮಾಡಲು ಸ್ವಲ್ಪವೂ ಹಿಂದೆಗೆಯುವುದಿಲ್ಲ. ತಾವು ಮಾಡುವ ಹೀನ ಕೃತ್ಯಗಳು ಬಹಿರಂಗಗೊಳ್ಳದಂತೆ ಮುಚ್ಚಿಡುವಲ್ಲಿ ಅಥವಾ ಮರೆ ಮಾಚುವಲ್ಲಿ ತಮ್ಮೆಲ್ಲ ಬುದ್ಧಿಚಾತುರ್ಯ ಜಾಣ್ಮೆಗಳನ್ನು ತೋರಿಸುತ್ತಾರೆ. ಜನರು ಲೋಕದ ಕಣ್ಣಿಗೆ ಒಳ್ಳೆಯವರಂತೆ ಕಾಣಿಸಲು ಬಯಸುತ್ತಾರೆಯೇ ಹೊರತು ತಮ್ಮ ಅಂತರಾತ್ಮನ ಕಣ್ಣಿಗೆ ಒಳ್ಳೆಯವರಾಗಿರಬೇಕೆಂದು ಪ್ರಯತ್ನಿಸುವುದಿಲ್ಲ. ಇನ್ನು ಕೆಲವರು ಒಳ್ಳೆಯವರಿದ್ದರೂ ತಮ್ಮ ಒಳ್ಳೆಯತನವನ್ನು ಲೋಕವು ಗುರುತಿಸುವುದಿಲ್ಲವಲ್ಲಾ ಎಂದು ಹಳಹಳಿಸುವವರೇ ಹೆಚ್ಚು. ಲೋಕ ಮೆಚ್ಚಲಿ ಬಿಡಲಿ ಅದನ್ನು ತಲೆಗೆ ಹಚ್ಚಿಕೊಳ್ಳದೆ ತಮ್ಮ ಕರ್ತವ್ಯದಲ್ಲಿ ತಾವು ನಿರತರಾಗಿ ಆತ್ಮ ತೃಪ್ತಿಯನ್ನು ಕಾಣುವ ಜನರು ಬಹಳ ವಿರಳ. ಅಂತಹ ಅಪರೂಪವಾದ ಆತ್ಮ ಸಂತುಷ್ಟಿಯನ್ನುಳ್ಳ ಜೀವಂತ ಉದಾಹರಣೆಯೇನಾದರೂ ಇದ್ದರೆ ಅದು ಮಾತೃ ಹೃದಯವೊಂದೇ ಎಂದು ನಮ್ಮ ಭಾವನೆ. ಮಗು ಬೆಳೆದು ವಯಸ್ಸಿಗೆ ಬಂದ ಮೇಲೆ ತನ್ನನ್ನು ಪ್ರೀತಿಸುವುದೇ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ನಿರ್ವ್ಯಾಜ ಪ್ರೀತಿ ವಾತ್ಸಲ್ಯಗಳಿಂದ ತಾಯಿಯು ಮಗುವನ್ನು ಮುದ್ದಿಸುತ್ತಾಳೆ. ಉಳಿದ ಎಲ್ಲಾ ರೀತಿಯ ಮಾನವೀಯ ಸಂಬಂಧಗಳು ಅವು ಎಷ್ಟೇ ಉನ್ನತವಾಗಿ ಕಂಡರೂ ಅವುಗಳ ಹಿಂದೆ ಒಂದಲ್ಲ ಒಂದು ರೀತಿಯ ಸ್ವಾರ್ಥ ಕಾಣದಂತೆ ಅಡಗಿರುತ್ತದೆ. ವ್ಯಕ್ತಿಯು ತನ್ನ ಬುದ್ಧಿ ಚಾತುರ್ಯಗಳಿಂದ ಲೋಕದ ಜನರನ್ನು ಸುಲಭವಾಗಿ ವಂಚಿಸಬಹುದು; ಆದರೆ ತನ್ನ ಅಂತರಾತ್ಮವನ್ನು ಮಾತ್ರ ಹಾಗೆ ವಂಚಿಸಲು ಸಾಧ್ಯವಿಲ್ಲ. ಅಂತಃಸಾಕ್ಷಿಯು ಮನುಷ್ಯನ ಹೀನಕೃತ್ಯಗಳನ್ನಷ್ಟೇ ಅಲ್ಲ, ಅವನ ಮನಸ್ಸಿನ ಒಳತೋಟಿಯಲ್ಲಿರುವ ಕೆಟ್ಟ ಆಲೋಚನೆಗಳನ್ನೂ ಗುರುತಿಸಬಲ್ಲುದು. ಯಾವ ವ್ಯಕ್ತಿಗೆ ಈ ಒಳಿತು ಕೆಡಕುಗಳ ಪ್ರಜ್ಞೆ ಇರುತ್ತದೆಯೋ ಅವನೇ ನಿಜವಾದ ಧರ್ಮಿಷ್ಠ. ಅವನು ಯಾವುದೇ ರೀತಿಯ ಹೊರಗಿನ ಒತ್ತಡಗಳ ಕಾರಣದಿಂದಲ್ಲದೆ, ನೈಜ ಅರಿವಿನಿಂದ ಕೆಟ್ಟ ಮಾರ್ಗವನ್ನು ಬಿಟ್ಟು ಒಳ್ಳೆಯ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಾನೆ. ಅವನು ತನ್ನ ಧರ್ಮದ ಶುಷ್ಕ ವಿಧಿವಿಧಾನಗಳನ್ನು ಅನುಸರಿಸದೆ ಇರಬಹುದು; ಅಂದ ಮಾತ್ರಕ್ಕೇ ಅವನಿಗೆ ಅಧಾರ್ಮಿಕನೆಂಬ ಹಣೆಪಟ್ಟಿಯನ್ನು ಹಚ್ಚುವುದು ಉಚಿತವಲ್ಲ. ಪರಿಶುದ್ಧ ಚಾರಿತ್ರ್ಯವುಳ್ಳ ವ್ಯಕ್ತಿಯು ತನ್ನ ಅಂತರಾತ್ಮವು ಮೆಚ್ಚುವಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಾನೆಯೇ ಹೊರತು ಲೋಕದ ಜನರನ್ನು ಮೆಚ್ಚಿಸಲು ಮುಂದಾಗುವುದಿಲ್ಲ. ದುರ್ದೈವದ ಸಂಗತಿಯೆಂದರೆ ಈ ಪ್ರಪಂಚದಲ್ಲಿ ಅತಿ ಬುದ್ಧಿವಂತಿಕೆಯ, ಧೂರ್ತತನದ ಜಾಣ ಜನರೇ ಹೇರಳವಾಗಿದ್ದಾರೆ. ತಿಳಿಯದೇ ತಪ್ಪು ಮಾಡಿ ಸಿಕ್ಕಿಕೊಂಡವ ದಡ್ಡ; ತಿಳಿದೂ ತಪ್ಪು ಮಾಡಿ ಸಿಕ್ಕಿಕೊಳ್ಳದವ ಜಾಣ. ಇಂತಹ ಜಾಣ-ಜಾಣೆಯರಿಂದಲೇ ಇಂದಿನ ನವನಾಗರಿಕ ಪ್ರಪಂಚವು ತುಂಬಿ ಹೋಗಿದೆ. ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲಾಗದವನು ಶತದಡ್ಡ, ಅವನಿಗೆ ಏನೂ ತಿಳಿಯುವುದಿಲ್ಲ. "ಅಷ್ಟೂ ಬುದ್ಧಿ ಬೇಡವೇ, ಹೋಗಿ ಹೋಗಿ ಪೋಲೀಸರ ಕೈಗೆ ಸಿಕ್ಕಿಕೊಳ್ಳುವಂತೆ ಮಾಡುವುದೇ?" ಎಂದು ಜನ ಉದ್ಗರಿಸುತ್ತಾರೆ. ಮಾಡಬಾರದ ತಪ್ಪನ್ನು ಮಾಡಿಯೂ ಏನೂ ಆಗಿಲ್ಲವೆಂಬಂತೆ ಮುಚ್ಚಿ ಹಾಕಿಕೊಳ್ಳುವುದರಲ್ಲಿ ನಿಸ್ಸೀಮನಾದವನು ತುಂಬಾ ಜಾಣ, ಬುದ್ಧಿವಂತ. ಹೇಗಿದೆ ಆಧುನಿಕ ಜಾಣ ಜಾಣೆಯರ ಪರಿಭಾಷೆ! ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಂತಹ ಜಾಣ ಜನರ ಕೈ ಬಲಪಡಿಸಲು ಸೇರಿಕೊಳ್ಳುವ ಕಡುಜಾಣರಿಗೇನೂ ಕೊರತೆಯಿಲ್ಲ. ಈ ಅಸಂತುಷ್ಟ ಜನರು ಹಠಚಟಗಳಿಗೆ ಬಹುಬೇಗ ಕೊಡಿಕೊಳ್ಳುವಂತೆ ಒಂದು ಒಳ್ಳೆಯ ಕಾರ್ಯಕ್ಕೆ ಮುಂದಾಗುವುದಿಲ್ಲ. ತಮಗೆ ಆಗದ ವ್ಯಕ್ತಿಯ ವಿರುದ್ಧ ಒಂದಾಗುವ ಈ ಜನರು ತಮ್ಮ ದುಷ್ಟಕೂಟದಲ್ಲಿ ಒಂದು ರೀತಿಯ ವಿಕೃತ ಸಂತೋಷವನ್ನು ಪಡೆಯುತ್ತಾರೆ.

ಒಂದು ಕಾಲದಲ್ಲಿ ಕುಡಿಯುವುದೆಂದರೆ ಅದೊಂದು ನಿಕೃಷ್ಟವಾದ, ನೀತಿಬಾಹಿರವಾದ, "ಕಪ್ಪು ಜನರು" ಎನಿಸಿದ ಹರಿಜನರು ಮತ್ತು ಹಿಂದುಳಿದವರಿಗೆ ಮಾತ್ರ ಅಂಟಿದ ಕೆಟ್ಟ ಚಟವೆಂದು ಕೀಳಾಗಿ ಕಾಣುತ್ತಿದ್ದರು. ಆದರೆ ಈಗ ಅದು ಬದಲಾಗಿ ಮುಂದುವರೆದ ಜಾತಿಯವರೂ ಕುಡಿಯಲು ಆರಂಭಿಸಿದ್ದಾರೆ. ನಮ್ಮ ಪಾನನಿಷೇಧ ಆಂದೋಲನ ಜೋರಾಗಿ ನಡೆಯುತ್ತಿದ್ದ ಕಾಲದಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ಒಮ್ಮೆ ರಾಣೇಬೆನ್ನೂರು ತಾಲ್ಲೂಕಿನ ಒಂದು ಹಳ್ಳಿಯಿಂದ ಒಂದು ದೇವಸ್ಥಾನದ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಲು ಸಿರಿಗೆರೆಗೆ ಬಂದಿದ್ದರು. ನಿಮ್ಮ ಹಳ್ಳಿಯಲ್ಲಿರುವ ಮದ್ಯದ ಅಂಗಡಿಗಳನ್ನು ತೆಗೆಸಿಹಾಕಿದರೆ ಮಾತ್ರ ಬರಲು ಒಪ್ಪುವುದಾಗಿ ಹೇಳಿದ ಮಾತನ್ನು ಕೇಳಿ ಆಹ್ವಾನಿಸಲು ಬಂದ ಗ್ರಾಮದ ಹಿರಿಯರು ಅವಾಕ್ಕಾದರು. ಗ್ರಾಮದಲ್ಲಿ ಸಮಾಲೋಚಿಸಿಕೊಂಡು ಮತ್ತೆ ಬರುವುದಾಗಿ ಹೇಳಿ ಹೋದರು. ಹಳ್ಳಿಗೆ ಹಿಂದಿರುಗಿದ ಮೇಲೆ ಊರಲ್ಲಿ ಹಲಗೆ ಸಾರಿಸಿ ಎಲ್ಲರನ್ನೂ ಸೇರಿಸಿ ನಾವು ವಿಧಿಸಿದ ಷರತ್ತನ್ನು ಅವರಿಗೆ ವಿವರಿಸಿದರು. "ಏನಪ್ಪಾ ದುರ್ಗ ಏನೂ ಹೇಳುತ್ತೀಯೋ" ಎಂದು ಹರಿಜನ ಮುಖಂಡನೊಬ್ಬನನ್ನು ಗೌಡರು ಕೇಳಿದರು. ಅದಕ್ಕೆ ಆ ದುರ್ಗಪ್ಪ ಕೊಟ್ಟ ಉತ್ತರ: "ಸ್ವಾಮಿ, ನಾವು ಕುಡಿಯುವುದನ್ನು ಬಿಟ್ಟು ಬಹಳ ವರ್ಷಗಳಾದವು, ನಿಮ್ಮವರೇ ಈಗ ಹೆಚ್ಚು ಕುಡಿಯಲು ಆರಂಭಿಸಿದ್ದಾರೆ. ಅವರನ್ನೇ ಕೇಳಿ!"

ಕುಡಿಯುವುದು ಈಗ ನವನಾಗರೀಕತೆಯ ಲಕ್ಷಣವಾಗಿ ಬೆಳೆದು ಕುಡಿಯದಿದ್ದವರೇ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಾಮಾಜಿಕ ಸನ್ನಿವೇಶ ರೂಪುಗೊಂಡಿದೆ. ಸರ್ಕಾರಿ ಕಛೇರಿಗಳಲ್ಲಿ ಆಗಬೇಕಾದ ಕೆಲಸವೇನಾದರೂ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬಾರುಗಳಲ್ಲಿ ಪಾರ್ಟಿಯನ್ನು ಕೊಡಿಸಿದರೆ ಸಾಕು ಸುಲಭವಾಗಿ ಕೆಲಸ ಆಗುತ್ತದೆ ಎಂದು ಜನರು ಮಾತನಾಡುತ್ತಾರೆ. ಇದೇ ರೀತಿ ಕುಡಿಸುವುದು ಒಂದು ಚುನಾವಣಾ ತಂತ್ರವೂ ಆಗಿಬಿಟ್ಟಿದೆ. ಚುನಾವಣೆಯ ಹಿಂದಿನ ದಿನ ಚೆನ್ನಾಗಿ ಕುಡಿಸಿದರೆ ಜನರಿಂದ ಸುಲಭವಾಗಿ ಓಟುಗಳನ್ನು ಗಿಟ್ಟಿಸಬಹುದು ಎಂಬ ಲೆಕ್ಕಾಚಾರವನ್ನು ರಾಜಕೀಯ ಹುರಿಯಾಳುಗಳು ಹಾಕುತ್ತಾರೆ. ಯಾರನ್ನೇ ಕೇಳಲಿ, ಮದ್ಯ ಪೂರೈಕೆ ಮಾಡದೆ "ಎಲೆಕ್ಷನ್" ಮಾಡಲು ಸಾಧ್ಯವಿಲ್ಲವೆನ್ನುತ್ತಾರೆ.

ಈಗ ನಿಜವಾಗಿಯೂ ಅನೇಕ ಪೋಷಕರು ತಮ್ಮ ಮಕ್ಕಳಿಗೆ ಕುಡಿಯಬೇಡಿ ಎಂದು ಹೇಳುವ ನೈತಿಕ ಶಕ್ತಿಯನ್ನೇ ಉಳಿಸಿಕೊಂಡಿಲ್ಲ. ತಮ್ಮ ಮಕ್ಕಳಿಗೆ ಎಲ್ಲ ದುಶ್ಚಟಗಳನ್ನು ಅವರೇ ಕಲಿಸುತ್ತಾರೇನೋ ಎನಿಸುತ್ತದೆ. ಹಳ್ಳಿಗರಿಗೆ ಬೆಳಗ್ಗೆ ಎದ್ದೊಡನೆಯೇ ನೆನಪಾಗುವುದು ದೇವರು ದಿಂಡರಲ್ಲ, ರಾತ್ರಿ ಮಲಗುವಾಗ ತಲೆದಿಂಬಿನ ಕೆಳಗೆ ಇಟ್ಟಿದ್ದ ಬೀಡಿ-ಬೆಂಕಿಪೊಟ್ಟಣಗಳು. ಬಾಯಲ್ಲಿ ಬೀಡಿ ಕಚ್ಚಿಕೊಂಡು ಬುಸುಗುಡುತ್ತಾ ಹಾಳು ಮುಖದಲ್ಲಿಯೇ ಊರ ಬೀದಿಯಲ್ಲಿ ಅಡ್ಡಾಡುವುದು ಬೆಳಗಿನ ಹೊತ್ತು ಹಳ್ಳಿಗಳಲ್ಲಿ ಕಾಣುವ ಒಂದು ಸಾಮಾನ್ಯ ದೃಶ್ಯ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯುತ್ತದೆ ಎನ್ನುವ ಗಾದೆ ಮಾತಿನಂತೆ ಬೆಳಗಾದೊಡನೆಯೇ ಮನೆಗೆಲಸದಲ್ಲಿ ತೊಡಗುವ ತಾಯಂದಿರು ಮಕ್ಕಳಿಗೆ ದೇವರ ಪೂಜೆಯನ್ನು ಮಾಡು ಎಂದು ಒತ್ತಾಯಪಡಿಸಿದರೆ ಈ ಮುತ್ಸಾಳ ತಂದೆಗಳು ಅದೇ ಮಕ್ಕಳನ್ನು "ಬೇಗನೆ ಓಡಿ ಹೋಗಿ ಬೀಡಿ ಬೆಂಕಿಪೊಟ್ಟಣಗಳನ್ನು ತೆಗೆದುಕೊಂಡು ಬಾ" ಎಂದು ಅಂಗಡಿಗಳಿಗೆ ಅಟ್ಟುತ್ತಾರೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎಂಬಂತೆ ಅಪ್ಪನ ಚಾಳಿ ಮಗನಿಗೆ ಬಂದರೆ ಆಶ್ಚರ್ಯಪಡಬೇಕಾಗಿಲ್ಲ.

ನಮ್ಮ ಸಂಸ್ಥೆಯ ವಿದ್ಯಾರ್ಥಿ ನಿಲಯವೊಂದರಲ್ಲಿ ಕಾಲೇಜು ಹುಡುಗನೊಬ್ಬ ತುಂಬಾ ಕುಡಿಯುತ್ತಿದ್ದ. ಸಾಕಷ್ಟು ತಿಳಿ ಹೇಳಿ ರೋಸಿಹೋಗಿದ್ದ ಹಾಸ್ಟಲ್ ವಾರ್ಡನ್‌ರವರು ಹುಡುಗನ ತಂದೆಗೆ ಒಂದು ಪತ್ರ ಬರೆದು, ಮನೆಗೆ ಬಂದಾಗ ನಿಮ್ಮ ಹುಡುಗನಿಗೆ ಸರಿಯಾಗಿ ವಿವೇಕ ಹೇಳಿ ಎಂದು ವಿನಂತಿಸಿಕೊಂಡಿದ್ದರು. ಮನೆಯಿಂದ ಮರಳಿ ಬಂದ ಹುಡುಗ ಕೈಯಲ್ಲಿ ಆ ಪತ್ರವನ್ನು ಹಿಡಿದುಕೊಂಡೇ ಬಂದ. ಓರಿಗೆಯ ಧಾಂಡಿಗರೊಂದಿಗೆ ವಾರ್ಡನ್ ಆಫೀಸಿಗೆ ಧಾಳಿಯಿಟ್ಟ. ಟೇಬಲ್ ಮೇಲೆ ಆ ಪತ್ರವನ್ನು ಬಿಸಾಡಿ ಕೈಯಲ್ಲಿ ಮೀಸೆಯನ್ನು ಹುರಿ ಮಾಡುತ್ತಾ "ನಮ್ಮ ತಂದೆಗೆ ಹೀಗೆ ಪತ್ರ ಬರೆಯಬಹುದೇ? ಎಂದು ಜೋರು ಮಾಡಿದ. ವಾರ್ಡನ್‌ರವರಿಗೆ ಕೈಕಾಲು ನಡುಗಲು ಆರಂಭಿಸಿದವು. "ನಿಮ್ಮಪ್ಪ ನಿನಗೆ ಬುದ್ಧಿ ಹೇಳಲಿ, ತಂದೆಯ ಮಾತಿನಿಂದಲಾದರೂ ನೀನು ಒಳ್ಳೆಯವನಾಗಲಿ ಎಂದು ಹಾಗೆ ಬರೆದೆನಪ್ಪಾ" ಎಂದು ಕ್ಷೀಣ ಸ್ವರದಲ್ಲಿ ಅವರು ಉತ್ತರಿಸಿದರು. ಅದಕ್ಕೆ ಆ ಹುಡುಗ ಏನು ಹೇಳಿದ ಗೊತ್ತೆ? "ಅಲ್ಲಾ ಸಾರ್, ನೀವು ಬರೆಯೋದು ಬರೆದಿರಿ, ನಮ್ಮ ಅಪ್ಪನಿಗೆ ಬರೆದಿದ್ದೀರಲ್ಲಾ, ನಿಮಗೆ ಬುದ್ಧಿ ಇದೆಯೇ? ನಮ್ಮ ಅಪ್ಪ ಕುಡಿಯುವ ಕಾಲು ಭಾಗ ನಾನು ಕುಡಿಯುವುದಿಲ್ಲ" ಎಂದ ಹುಡುಗ. ಅದುವರೆಗೆ ಜಂಘಾಬಲ ಉಡುಗಿದ್ದ ಬಡಪಾಯಿ ವಾರ್ಡನ್ ನಿಟ್ಟುಸಿರು ಬಿಟ್ಟ.

ಮದ್ಯಪಾನ ಮತ್ತು ಮಾದಕ ವಸ್ತುಗಳ ಪಿಡುಗು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೇಗೆ ಮೇರೆ ಮೀರಿ ಬೆಳೆದಿದೆಯೆಂಬುದಕ್ಕೆ ಬಹಳ ವರ್ಷಗಳ ಹಿಂದೆ ನಮ್ಮ ಮಠಕ್ಕೆ ಬಂದಿದ್ದ ಶ್ರೀಮತಿ ಫ್ರಾನ್ಸಿಸ್ಕಾ ಓಷಲ್‌ಬರ್ಗರ್ (Franziska Ochlberger) ಎಂಬ ಐರೋಪ್ಯ ಮಹಿಳೆಯು ನಮಗೆ ಬರೆದ ಪತ್ರದಲ್ಲಿರುವ ಈ ಕೆಳಗಿನ ಸಾಲುಗಳು ಮನನೀಯವಾಗಿವೆ.

> "ತಾವು ಮದ್ಯಪಾನದ ವಿರುದ್ಧ ಕೈಗೊಂಡಿರುವ ಆಂದೋಲನವನ್ನು ಕುರಿತು ಕೆಲವು ವಿಚಾರಗಳು. ಇದು ನಿಜವಾಗಿಯೂ ಮೆಚ್ಚಬೇಕಾದ ಕೆಲಸ. ವಿಶೇಷವಾಗಿ ಇಂದಿನ ಯುವ ಪೀಳಿಗೆಯ ಹಿತದೃಷ್ಟಿಯಿಂದ ಸಾಧ್ಯವಾದ ಎಲ್ಲ ಪ್ರಯತ್ನವನ್ನೂ ಮಾಡುವುದು ಅವಶ್ಯವಾಗಿ ಆಗಲೇಬೇಕಾದ ಕಾರ್ಯ. ಮದ್ಯಪಾನ ಮತ್ತು ಮಾದಕ ವಸ್ತು ಸೇವನೆಯು ಬಡರಾಷ್ಟ್ರಗಳಿಗಷ್ಟೇ ಅಲ್ಲ; ಶ್ರೀಮಂತ ರಾಷ್ಟ್ರಗಳಿಗೂ ಒಂದು ದುಃಸ್ವಪ್ನವಾಗಿದೆ. ಯುರೋಪ್ ಮತ್ತು ಅಮೆರಿಕಾದ ದೊಡ್ಡ ದೊಡ್ಡ ನಗರಗಳಲ್ಲಿ ಇದು ಬಿಡಿಸಲಾಗದ ಸಮಸ್ಯೆಯಾಗಿದೆ. ಮಾದಕ ವಸ್ತು ಮಾರಾಟಗಾರರ ಜಾಲಕ್ಕೆ ಶಾಲೆಯ ಮಕ್ಕಳೂ ಸಹ ಬಲಿಯಾಗುತ್ತಿದ್ದಾರೆ. ಒಡೆದು ಹೋಗುತ್ತಿರುವ ಕುಟುಂಬಗಳಲ್ಲಿ ನೆಮ್ಮದಿ ಮತ್ತು ಸುಖ ಶಾಂತಿಯನ್ನು ಕಾಣದೆ ಹತಾಶರಾದ ಮಕ್ಕಳು ಮತ್ತು ಯುವಕರು ಅಮಾನವೀಯವಾದ, ಕಲುಷಿತವಾದ ಮತ್ತು ಹಣದ ಪ್ರಭಾವದಿಂದಲೇ ಎಲ್ಲವೂ ನಡೆಯುವ ಈ ಪ್ರಪಂಚದಿಂದ ಬೇಸತ್ತು ಸುಭದ್ರವಾದ ಕೌಟುಂಬಿಕ ಜೀವನದ ಸುಖ ಶಾಂತಿಯ ಕಲ್ಪನಾ ಪ್ರಪಂಚದಲ್ಲಿ ವಿಹರಿಸಲು ಮಾದಕವಸ್ತು ಸೇವನೆಗೆ ಶರಣಾಗುತ್ತಿದ್ದಾರೆಂದು ತೋರುತ್ತದೆ".

ಪಾಶ್ಚಾತ್ಯ ರಾಷ್ಟ್ರಗಳನ್ನು ನಾಚಿಸುವಂತೆ ಮೇರೆಮೀರಿ ಬೆಳೆಯುತ್ತಿರುವ ಮದ್ಯಪಾನದ ಪಿಡುಗು ನಮ್ಮ ದೇಶದ ಮೂಲೆ ಮೂಲೆಯ ಹಳ್ಳಿಗೂ ವ್ಯಾಪಿಸಿದೆ. ಇದರ ಪರಿಣಾಮವಾಗಿ ಭಾರತೀಯ ಸಮಾಜದ ಸ್ಥಿತಿ ಈ ಕೆಳಗಿನ ಸಂಸ್ಕೃತ ಸೂಕ್ತಿಯಲ್ಲಿ ವರ್ಣಿಸಿದ ಹುಚ್ಚು ಮಂಗನಂತಾಗಿದೆ.

ಮರ್ಕಟಸ್ಯ ಸುರಾಪಾನಂ ಮಧ್ಯೇ ವೃಶ್ಚಿಕದಂಶನಂ ।
ತನ್ಮಧ್ಯೇ ಭೂತಸಂಚಾರಃ ಯದ್ವಾ ತದ್ವಾ ಭವಿಷ್ಯತಿ ॥

ಮೊದಲೇ ಕೋತಿ. ಸಹಜವಾಗಿಯೇ ಅದರ ನೂರಾರು ಕಪಿಚೇಷ್ಟೆಗಳು. ಇನ್ನು ಅದಕ್ಕೆ ಹೆಂಡ ಕುಡಿಸಿದರೆ ಏನಾಗಬಹುದು ! ಈ ಮಧ್ಯೆ ಅದಕ್ಕೆ ಒಂದು ಚೇಳು ಕುಟುಕಿತು. ಸಾಲದ್ದಕ್ಕೆ ಒಂದು ಭೂತ ಬೇರೆ ಹೊಕ್ಕಿತು. ಇನ್ನು ಕೇಳಬೇಕೆ ಆ ಮಂಗನ ಚೇಷ್ಟೆಯನ್ನು. ಪ್ರಾಯಶಃ ಭಾರತೀಯ ಸಮಾಜದ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಜನರು ಹುಚ್ಚು ಮಂಗಗಳಂತೆ ಕುಣಿಯುತ್ತಿದ್ದಾರೆ. ರಾಜಕಾರಣಿಗಳು ಜನರನ್ನು ಹುಚ್ಚು ಮಂಗಗಳಂತೆ ಕುಣಿಸುತ್ತಲೂ ಇದ್ದಾರೆ. ಈ ಕೋತಿಗಳ ಡೊಂಬರಾಟವು ಎಲ್ಲಿಗೆ ಹೋಗಿ ನಿಲ್ಲುತ್ತದೋ ದೇವರೇ ಬಲ್ಲ !

3.3.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ